ಇಳಿ ಸಂಜೆಯ ಸೂರ್ಯ ನಿಚ್ಚಳವಾಗಿ ನಗುತ್ತಿದ್ದ. ಬಾಲ್ಕನಿಯ ಹೊಸ್ತಿಲ ಮೇಲೆ ಬಿದ್ದ ಬಿಸಿಲು ಕೋಲು ಸುಮ್ಮನೆ ಹೊಯ್ದಾಡುತ್ತಿತ್ತು. ಮೊಬೈಲ್ ಎತ್ತಿಕೊಂಡು ಬಾಲ್ಕನಿಗೆ ಬಂದ ಸಮೀರ, ತನ್ನ ಭಾವೀ ಪತಿ ಸಾದಿಕ್ ಜೊತೆ ಮಾತಾಡುತ್ತಾ, 'ಸಂಜೆ ಮುಗಿಲಿನ ಭಾವ ಕಿರಣಗಳಲ್ಲಿ ಮೀಯುತ್ತಿದ್ದೇನೆ. ನೀವೀಗ ಜೊತೆಗಿರಬೇಕಿತ್ತು' ಎಂದಳು. ಅವನು 'ಈ ಕವಿತೆ ಗಿವಿತೆಗಳೆಲ್ಲಾ ನನಗೆ ಅರ್ಥ ಆಗುವುದಿಲ್ಲ, ಅರ್ಥ ಮಾಡಿಕೊಳ್ಳುವ ಆಸಕ್ತಿಯೂ ಇಲ್ಲ. ಅವೆಲ್ಲಾ ನಿನಗೇ ಇರಲಿ' ಎಂದ. ಅವನ ಧ್ವನಿಯಲ್ಲಿದ್ದ ಶುದ್ಧ ಪ್ರಾಕ್ಟಿಕಾಲಿಟಿಗೆ ಅವಳ ನವಿರು ಭಾವಗಳು ಒಮ್ಮೆ ಅಲ್ಲಾಡಿಬಿಟ್ಟವು.

ಹಾಗೆ ನೋಡುವುದಾದರೆ ಇದೇನೂ ಮೊದಲಲ್ಲ. ಎಂಗೇಜ್ಮೆಂಟ್ ದಿನಾನೇ ಓದಿನ ಬಗೆಗಿನ ಅವನ ಅನಾಸಕ್ತಿ ಅವಳಿಗೆ ತಿಳಿದುಬಿಟ್ಟಿತ್ತು. ತಾನು ಇಷ್ಟೊಂದು ಪ್ರೀತಿಸುವ ಸಾಹಿತ್ಯವನ್ನು ಅವನು ಬೋರಿಂಗ್ ಅಂದಾಗ ಅವಳು ಧರೆಗಿಳಿದು ಬಿಟ್ಟಿದ್ದಳು. ಆದರೆ ಅಪ್ಪ ನೋಡಿದ ಸಂಬಂಧ ಒಲ್ಲೆ ಎನ್ನಲಾಗದೆ ಒಪ್ಪಿಕೊಂಡಿದ್ದಳು. ಅಂದಿನಿಂದಲೂ ಪುಸ್ತಕ ಪ್ರೀತಿಯೆಡೆಗೆ ಅವನನ್ನು ಸೆಳೆಯುವ ಅವಳ ಪ್ರಯತ್ನ ಜಾರಿಯಲ್ಲೇ ಇತ್ತು.

ಆದರೆ ಈಗೀಗ ಒಪ್ಪಿ ತಪ್ಪು ಮಾಡಿದೆನೇನೋ ಅಂತೆಲ್ಲಾ ಬಲವಾಗಿ ಅನ್ನಿಸಲಾರಂಭಿಸಿತ್ತು. ಓದದ ವ್ಯಕ್ತಿಯ ಜೊತೆ ಜೀವನ ಪೂರ್ತಿ ಹೇಗೆ ಏಗಲಿ ಅಂತ ಯೋಚಿಸುತ್ತಿದ್ದಳು. ಅದನ್ನೇ ನಿನ್ನೆ ಅಪ್ಪನ ಬಳಿಯೂ ಹೇಳಿದ್ದಳು. ಅಪ್ಪ ಅವಳ ತಲೆ ನೇವರಿಸುತ್ತಾ 'ಓದದವನೂ ಚೆನ್ನಾಗಿ ಬದುಕುತ್ತಾನೆ ಮಗೂ. ಅದಕ್ಕಿಂತ ಹೆಚ್ಚಾಗಿ ನನ್ನ ಮಗಳಿಗೆ ಚಂದದ ಒಂದು ಬದುಕು ಕಟ್ಟಿಕೊಳ್ಳಲು ನೆರವಾಗುತ್ತಾನೆ ಎನ್ನುವ ವಿಶ್ವಾಸ ನನ್ನದು. ಇಷ್ಟಕ್ಕೂ ಅವನೇನೂ ನಿನ್ನಿಷ್ಟಗಳಿಗೆ ಅಡ್ಡಿಯಾಗಿಲ್ಲ. ಅವನದು ಪ್ರಾಕ್ಟಿಕಲ್ ಬದುಕು ಅಷ್ಟೆ. ಆದರೆ ನಿನಗೆ ಈ ಸಂಬಂಧ ಇಷ್ಟವಿಲ್ಲದಿದ್ದರೆ ಬೇಡ, ಬಿಟ್ಟುಬಿಡೋಣ. ನಿನ್ನ ಸಂಪೂರ್ಣ ಒಪ್ಪಿಗೆಯಿಲ್ಲದೆ ನಾವು ಮುಂದುವರಿಯುವುದಿಲ್ಲ. ಇವತ್ತಿನವರೆಗೂ ನಿನ್ನೆಲ್ಲಾ ನಿರ್ಧಾರಗಳನ್ನು ಗೌರವಿಸಿದ ಹಾಗೆಯೇ ಈ ನಿರ್ಧಾರವನ್ನೂ ಒಪ್ಪಿಕೊಂಡು ಗೌರವಿಸುತ್ತೇನೆ. ಆದರೆ ಆತುರ ಬೇಡ. ಸಾವಧಾನದಿಂದ ಯೋಚಿಸು. ಬೇಕಿದ್ದರೆ ಒಮ್ಮೆ ಹೊರಗೆಲ್ಲಾದರೂ ಹೋಗಿ ಬಾ' ಎಂದಿದ್ದರು.

ಅಪ್ಪನ ಮಾತನ್ನು ಒಪ್ಪಿಕೊಳ್ಳಲೂ ಆಗದೆ, ಪೂರ್ತಿ ತಿರಸ್ಕರಿಸಲೂ ಆಗದೆ ತುಮುಲವೊಂದು ಅವಳೊಳಗೆ ಮಗ್ಗುಲು ಬದಲಾಯಿಸುತ್ತಿತ್ತು. ಈಗಷ್ಟೇ ಕರೆ ಮಾಡಿದ ಅವನು ಕವಿತೆಯ ಬಗೆಗಿನ ತನ್ನ ನಿರಾಸಕ್ತಿಯನ್ನು ವ್ಯಕ್ತಪಡಿಸಿದಾಗ ಮತ್ತೆ ಯೋಚನೆಗೆ ಬಿದ್ದಳು.

ಸಂಜೆ ಸತ್ತು ಆಗಲೇ ಕತ್ತಲೆ ಹುಟ್ಟಿಕೊಳ್ಳಲಾರಂಭಿಸಿತ್ತು. ಯೋಚನೆಗಳಲ್ಲಿ ಮೈಮರೆತವಳನ್ನು ಒಮ್ಮೆ ಬೀಪ್ ಆಗಿ ಸುಮ್ಮನಾದ ಮೊಬೈಲ್ ಎಚ್ಚರಿಸಿತು. ನೋಟಿಫಿಕೇಷನ್, ಫೇಸ್‌ಬುಕ್ ಗೆಳೆಯನ ಮೆಸೇಜ್ ತೋರಿಸುತ್ತಿತ್ತು. ಸಮೀರ ಅವನ ಮೆಸೇಜ್ ಅನ್ನು ನಿರ್ಲಕ್ಷಿಸಿ ಗಲ್ಲಕ್ಕೆ ಕೈ ಹೊತ್ತು ಮತ್ತೆ ಯೋಚನೆಗಳಲ್ಲಿ ಮುಳುಗಿ ಹೋದಳು. ಮತ್ತೆ ಮೊಬೈಲೆ ಬೀಪ್ ಆಯ್ತು, ತೆರೆದು ನೋಡಿದರೆ ಅದೇ ಫೇಸ್‌ಬುಕ್ ಗೆಳೆಯ ರಫಿಯ ಮೆಸೇಜ್.

'ಯಾಕೆ ಗೆಳತಿ ಈ ಮೌನ? ಅದೆಷ್ಟು ಅಕ್ಷರಗಳು ನಿನ್ನ ಮಾತು ಕೇಳಲು ಕಾದು ಕುಳಿತಿವೆ ನೋಡು' ಅಂತಿತ್ತು. ಅವಳು 'ಕತ್ತಲು ಹುಟ್ಟುತ್ತಿದೆ. ಈ ಮೌನ ಹಿತವಾಗಿದೆ. ತನ್ನ ಗಡಿ ದಾಟಿದ ಮೇಲೆ ಮಾತೂ ಮೌನಕ್ಕೆ ಶರಣಾಗಲೇಬೇಕಲ್ಲವೇ?' ಎಂದು ಟೈಪಿಸಿದಳು. ಆ ಕಡೆಯಿಂದ ಅವನು 'ಕತ್ತಲೆಗೇಕೆ ಭಯ? ನೀನೇ ಬೆಳಕಿನ ಒಂದು ಪುಟ್ಟ ಕವಿತೆ' ಎಂದು ಮಾರುತ್ತರಿಸಿದ. 'ಕತ್ತಲಿಗೆ ಬೆಳಕನುಣ್ಣಿಸುವ ಹುಂಬತನ ನನ್ನಲ್ಲಿಲ್ಲ. ಕತ್ತಲಾದರೂ ಅಷ್ಟೆ, ಬೆಳಕಾದರೂ ಅಷ್ಟೆ, ಅವೆರಡನ್ನೂ ಇರುವಷ್ಟೇ ಸಹಜವಾಗಿ ಸ್ವೀಕರಿಸುತ್ತೇನೆ' ಎಂದಳು.

'ನೋಡು ನೀನಿಷ್ಟವಾಗುವುದೇ ಇದಕ್ಕೆ. ಅದೆಷ್ಟು ಚೆನ್ನಾಗಿ ಬರೆಯುತ್ತೀಯಾ! ನಿನ್ನ ಪ್ರತೀ ಅಕ್ಷರಗಳಲ್ಲೂ ನನಗೆ ಉಕ್ಕಿ ಹರಿಯುವ ಜೀವನ ಪ್ರೀತಿ ಕಾಣಿಸುತ್ತದೆ. ನೀ ಹೀಗೆಯೇ ಬರೆಯುತ್ತಿದ್ದರೆ ನಾನು ಜೀವನ ಪೂರ್ತಿ ನಿನ್ನನ್ನೇ ಓದುತ್ತಾ ಕುಳಿತುಬಿಡುತ್ತೇನೆ' ಎಂದ. ಅವಳು 'ಹೊಗಳಿಕೆಯ ಹೊನ್ನ ಶೂಲಕ್ಕೆ ಏರಿಸಬೇಡ. ನಾನೀಗಾಗಲೇ ಗೊಂದಲದಲ್ಲಿದ್ದೇನೆ' ಎಂದಳು. 'ನಿಶ್ಚಿತಾರ್ಥ ಮುಗಿಸಿಕೊಂಡು ಮದುವೆ ಮುಂದೆ ನೋಡುತ್ತಿರುವ ಹೆಣ್ಣಿಗೇನು ಗೊಂದಲ? ಒಂದು ನಿಡಿದಾದ ಉಸಿರುಬಿಟ್ಟು ಕಣ್ಣು ಮುಚ್ಚಿ ಅವನನ್ನೊಮ್ಮೆ ನೆನೆಸಿಕೋ, ಕಣ್ಣು ತೆರೆಯುವಷ್ಟರಲ್ಲಿ ಒಂದು ಚಂದದ ಪ್ರೇಮ ಕಾವ್ಯ ನಿನ್ನೊಳಗೆ ಮೂಡಿರುತ್ತದೆ' ಎಂದ. ಅವಳು, ನನ್ನ ಎದೆಗುದಿಗಳು ನಿನಗೆ ಅರ್ಥವಾಗದು ಅಂತ ಅಂದುಕೊಳ್ಳುತ್ತಾ 'ನಾ ಬರ್ಲಾ?' ಕೇಳಿದಳು. ಅವನು 'ಹುಮ್ ಹೋಗು, ಮತ್ತೆ ಬರುವಾಗ ನಿನ್ನ ಅಣು ಅಣುವಿನೊಳಗೂ ಹರಡಿಕೊಂಡಿರುವ ಕವಿತೆಗಳ ಹೆಕ್ಕಿ ತಾ. ನಾನು ಈ ಸಂಪಿಗೆ ಮರದಡಿಯಲ್ಲಿ ಕಾಯುತ್ತಿರುತ್ತೇನೆ' ಎಂದ. ಅವಳೊಂದು ಶುಷ್ಕ ನಗುವಿನ ಇಮೋಜ್ ಕಳುಹಿಸಿ ಸುಮ್ಮನಾದಳು.

ತಿಂಗಳ ಹಿಂದೆಯಷ್ಟೇ ಫೇಸ್‌ಬುಕ್‌ನ ತೇಜಸ್ವಿ ಬರಹಗಳ ಚರ್ಚೆಯೊಂದರಲ್ಲಿ ಸಮೀರಾಳಿಗೆ ರಫಿಯ ಪರಿಚಯವಾಗಿತ್ತು. ಅವನ ಬರವಣಿಗೆಯ ಶೈಲಿ, ಭಾಷಾ ಶುದ್ಧತೆ ಅವಳ ಅಚ್ಚರಿಗೆ ಕಾರಣವಾಗಿದ್ದರೆ, ಅವಳ ನಿರ್ಭಿಡತೆ ಅವನಲ್ಲೊಂದು ಕುತೂಹಲವನ್ನು ಹುಟ್ಟು ಹಾಕಿತ್ತು. ಅಲ್ಲಿಂದಾಚೆ ಇಬ್ಬರೂ ತಮಗರಿಯದೇ ಆತ್ಮೀಯರಾದರು. ಬಹುಶಃ ಈ ಒಂದು ತಿಂಗಳಲ್ಲಿ ಅವರು ಚರ್ಚಿಸದ ವಿಷಯವೇ ಇಲ್ಲವೇನೋ? ಈಗ ಅವಳ ತೇಜಸ್ವಿ ಅವನಿಗೆ ಮತ್ತು ಅವನ ಲಂಕೇಶ್ ಇವಳಿಗೆ ಪರಮಪ್ರಿಯರಾಗಿದ್ದರು. ಅವನ ಮಾತುಗಳಲ್ಲಿ ಆಗಾಗ ಇಣುಕುತ್ತಿದ್ದ ಅವಳ ಬಗೆಗಿನ ಆಸಕ್ತಿ, ವಿಶೇಷ ಆಸ್ಥೆ, ಅತಿ ಹೊಗಳಿಕೆಗಳು ಅವಳಿಗೆ, ಇವನೇನಾದರೂ ತನ್ನನ್ನು ಪ್ರೀತಿಸುತ್ತಿರಬಹುದೇ ಅಂತ ಅನ್ನಿಸುವಂತೆ ಮಾಡುತ್ತಿತ್ತು. ಅವೆಲ್ಲಕ್ಕೂ ಇಂಬು ಕೊಡುವಂತೆ ಒಂದು ವಾರದ ಹಿಂದೆಯಷ್ಟೇ 'ಮದುವೆಯಾಗಬೇಕು, ಕವಿ ಮನಸ್ಸಿನ ಹೆಣ್ಣು ಬೇಕು' ಅಂತ ಸ್ಟೇಟಸ್ ಅಪ್‌ಡೇಟ್ ಮಾಡಿದ್ದ. ಆ ಬಗ್ಗೆಯೆಲ್ಲಾ ಅವಳು ಯಾವತ್ತೂ ಹೆಚ್ಚು ಯೋಚಿಸಿದವಳೇ ಅಲ್ಲ. ಆದರೆ ಇವತ್ತು ಮಾತ್ರ 'ಅರೆ! ನಾನ್ಯಾಕೆ ರಫಿಯನ್ನೇ ಮದುವೆಯಾಗಬಾರದು?' ಎನ್ನುವ ಯೋಚನೆಯೊಂದು ಅವಳ ಮನದಲ್ಲಿ ಕ್ಷಣ ಕಾಲ ನಿಂತು ಹೋಯಿತು.

'ಹೌದಲ್ವಾ? ಈ ಬಗ್ಗೆ ನಾನು ಯೋಚಿಸಿರಲೇ ಇಲ್ಲ. ನನಗಿಷ್ಟು ಆತ್ಮೀಯ, ಸಮಾನ ಮನಸ್ಕ, ಮೇಲಾಗಿ ಸಭ್ಯ. ನಾನೇಕೆ ಇವನ ಮುಂದೆ ವಿವಾಹ ಪ್ರಸ್ತಾಪ ಇಡಬಾರದು ಅನ್ನಿಸಿ, 'ನಾಳೆ ಕವಿಶೈಲಕ್ಕೆ ಹೋಗುತ್ತಿದ್ದೇನೆ. ಒಮ್ಮೆ ಭೇಟಿಯಾಗೋಣವೇ? ನಿನ್ನೊಂದಿಗೆ ಒಂದಿಷ್ಟು ವಿಷಯಗಳನ್ನು ಚರ್ಚಿಸಬೇಕಿದೆ' ಎಂದು ಸಂದೇಶ ಕಳುಹಿಸಿದಳು. ಮರುಕ್ಷಣ ಅತ್ತಲಿಂದ 'ಆಕಾಶ ದಿಟ್ಟಿಸುತ್ತಾ ಇನ್ನೂ ಬಾರದ ನಿನ್ನ ಕವಿತೆಗಳನ್ನು ಕಾಯುತ್ತಿದ್ದೆ. ಈಗ ನಿನ್ನಿಂದ ಭೇಟಿಯ ಆಫರ್! ದೇವನಿಗೊಂದು ಕೃತಜ್ಞತೆ ಸಲ್ಲಿಸೋಣವೆಂದು ಮೇಲೆ ನೋಡಿದರೆ ಮತ್ಸರದಿಂದ ನಕ್ಷತ್ರಗಳೆಲ್ಲಾ ಮಾಯವಾದವು. ಈಗ ಖಾಲಿ ಆಕಾಶದ ತುಂಬಾ ನಿನ್ನ ಪ್ರತಿಬಿಂಬ. ನಾಳೆ ನೀ ಬರುವ ಮುಂಚೆಯೇ ನಿನಗಾಗಿ ಕಾಯುತ್ತಿರುತ್ತೇನೆ. ನಾನೀಗ ಸಂತೃಪ್ತ' ಎಂದು ಮರುತ್ತರಿಸಿದ. ಯಾವುದೋ ಅರಿಯದ ಭಾವವೊಂದು ಅವಳನ್ನು ಬಳಸಿ ಅಲ್ಲೇ ಅಂತರ್ಧಾನವಾಯಿತು. ದೂರದಲ್ಲೆಲ್ಲೋ ಬಾಗಿ ನಿಂತ ಪೈರೊಂದು ಹಿತವಾಗಿ ಭೂಮಿಯನ್ನು ಸ್ಪರ್ಶಿಸಿದಂತಾಯಿತು.

ಆ ರಾತ್ರಿ ಪೂರ್ತಿ ಅವಳ ಕಣ್ಣಿನ ಕಪ್ಪು ಬಿಳುಪಿನ ಕನಸುಗಳೆಲ್ಲಾ ಬಣ್ಣ ಪಡೆದುಕೊಂಡಿದ್ದವು. ಚಿತ್ರಕಾರನೊಬ್ಬ ತನ್ನ ಕುಂಚದಿಂದ ಆಕಾಶದ ಪೂರ್ತಿ ಚಿತ್ತಾರ ಬಿಡಿಸುತ್ತಿದ್ದ.

ಮರುದಿನ ಬೇಗ ಎದ್ದು ರೆಡಿಯಾಗಿ, ಎಂದಿಗಿಂತಲೂ ನಾಜೂಕಾಗಿ ಅಲಂಕಾರ ಮುಗಿಸಿ ತನ್ನ ಪ್ರೀತಿಯ ಕೈನಿ ಹತ್ತಿ ಕವಿಶೈಲಕ್ಕೆ ಹೊರಟಳು. ದಾರಿ ಮಧ್ಯೆ ಇಳಿದು ಅವನಿಗಂತಲೇ ಲಂಕೇಶರ 'ನೀಲು' ಕವಿತೆಗಳ ಸಂಗ್ರಹವೊಂದನ್ನು ಕೊಂಡು ಮತ್ತೆ ಲಗುಬಗೆಯಿಂದ ಹೊರಟಳು.

ಕವಿಶೈಲ ತಲುಪುವ ಹೊತ್ತಿಗಾಗುವಾಗಲೇ ರಫಿ, ಅಚ್ಚ ಬಿಳಿ ಗುಲಾಬಿ ಹೂವಿನ ಬೊಕ್ಕೆ ಹಿಡಿದು ಶುಭ್ರವಾಗಿ ನಗುತ್ತಾ ನಿಂತಿದ್ದ. ಹಿಂದೆ ಒಮ್ಮೆಯೂ ಭೇಟಿಯಾಗದ, ತನ್ನದೊಂದು ಪಟವನ್ನೂ ನೋಡಿರದ ನನ್ನನ್ನು ಹೇಗೆ ಕಂಡುಹಿಡಿದ ಎಂದು ಅಚ್ಚರಿಪಡುತ್ತಲೇ ಅವನನ್ನು ಕೇಳಿದಳು. ಅವನು 'ಬಿಡು ಗೆಳತೀ, ನೋಡಬೇಕೆಂದಿಲ್ಲ. ನಿನ್ನಿರುವಿಕೆಯೇ ಈ ಗಾಳಿಯಲ್ಲಿ ಕವಿತೆಯ ಘಮವನ್ನು ಹೊತ್ತು ತಂದಿದೆ' ಎಂದ. ಭಾವುಕಳಾದ ಸಮೀರಾ ಸುಮ್ಮನೆ ನಡೆಯತೊಡಗಿದಳು. ಯಾವ ತಲ್ಲಣವು ಯಾವ ರೂಪ ತಾಳುತ್ತದೋ ಅನ್ನುವ ಆತಂಕವೊಂದು ಸುಮ್ಮನೆ ಹೊಯ್ದಾಡುತ್ತಲೇ ಇತ್ತು.

ಮತ್ತೆ ಮೌನ ಮುರಿದ ರಫಿ 'ಮಾತಾಡು ಸಮೀರಾ, ನೀ ಹೀಗೆ ಮೌನವಾಗಿದ್ದರೆ ನನಗೇನೂ ತಿಳಿಯುವುದಿಲ್ಲ. ನಿನ್ನ ಮೌನವನ್ನು ತಲುಪುವ ದಾರಿ ನನಗೆ ಗೊತ್ತಿಲ್ಲ' ಎಂದ. ಸಮೀರಾ 'ಶ್! ಸುಮ್ಮನಿರು. ನಿನ್ನ ಮಾತು ಮುಗಿದ ಮೇಲೆ ಉಳಿಯುವ ಮೌನವನ್ನು ಹೆಕ್ಕುವ ಕಾಯಕವಷ್ಟೇ ನನ್ನದು. ನನ್ನ ಮಾತಾಡಿಸಬೇಡ' ಎಂದು ಅಲ್ಲೇ ಇದ್ದ ಕಲ್ಲು ಬೆಂಚಿನ ಮೇಲೆ ಕೂತು